SN – 080

I ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2013
(Repeaters Scheme) (2010-11 Only)
ಕನ್ನಡ ಭಾಷಾ ಪತ್ರಿಕೆ – I
ಸಾಹಿತ್ಯ ಸಮನ್ವಯ -೧ ಮತ್ತು ಗುಣಮುಖ ನಾಟಕ

Time : 3 Hours Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : (1×10=10)

1) ಕುಂಭಜ ಎಂದರೆ ಯಾರು ?
2) ವಿಳಾಸಿನಿ ತಿರುನೀಲಕಂಠರ ಮೇಲೆ ಏನನ್ನು ಚೆಲ್ಲಿದಳು ?
3) ಚಿತ್ರಾಂಗದ ಯಾರನ್ನು ಹೆಡೆಮುರಿ ಕಟ್ಟಿದನು ?
4) "ಇದು ನನ್ನ ವಿದ್ಯಾರಂಭದ ಆಲ್ಬಂ" ಎಂದು ಯಾರು ಹೇಳಿದ್ದಾರೆ ?
5) ರಾಮಿಗೆ ಕಾಡಿನಲ್ಲಿ ಎದುರಾದ ಪ್ರಾಣಿ ಯಾವುದು ?
6) ರುದ್ರಪ್ಪನಿಗೆ ಅವರ ಅಣ್ಣ ಕೊಟ್ಟ 'ಪಾಲು' ಏನು ?
7) ಪಂಪ ಅರ್ಜುನನನ್ನು ಯಾರಿಗೆ ಹೋಲಿಸಿದ್ದಾನೆ ?
8) "ಕೂಗು" ಕಥೆಯ ಕರ್ತೃ ಯಾರು ?
9) 'ಗುಣಮುಖ' ನಾಟಕದಲ್ಲಿ ಸರ್ಕಾರಿ ವೈದ್ಯನ ಹೆಸರೇನು ?
10) ಅಲಾವಿ ಖಾನ್ ನ ಸಂಗಾತಿಯ ಹೆಸರೇನು ?

II. ಯಾವುದಾದರೂ ಐದಕ್ಕೆ ಟಿಪ್ಪಣಿ ಬರೆಯಿರಿ : (5×2=10)

1) ಹರಿಹರ
2) ವರದಿಗಾರ
3) ಚಂಪೂ
4) ಶ್ರೀಮುಡಿ
5) ಶಿವರಾಮಯ್ಯ
6) ನಿಂಗಜ್ಜಿ
7) ತನ್ವೀರ್
8) ಸಾದತ್ ಖಾನ್.

P.T.O.

III. ಒಂದು ಕಾವ್ಯ ಭಾಗವನ್ನು ವಿಶ್ಲೇಷಿಸಿ : (1×6=6)

ಎಮ್ಮಂ ಪಿಡಿದೆಟೆವಂದಿನ
ನಿಮ್ಮದಟುಗಳೀಗಳೆತ್ತ ಪೋದುವೊ ಪಿಡಿವ
ಟ್ಟಮ್ಮ ಬಲಿಲ್ದಿರೆ ಕಂಡಿರೆ
ನಿಮ್ಮಳವಂ ನಿಮಗಮೀಗಳೀಯೆಡರಾಯ್ತೇ

ಅಥವಾ

ಮೋಯೀನಿ ಯವತಾರಾನೆತ್ತಿ–ಮಂಕು
ರಾಕ್ಷಸರಿಗೆ ಸೊನ್ನೆಸುತ್ತಿ – ದೇವ
ತೆಗಳಿಗೆ ಅಮ್ರುತದ ಬುತ್ತಿ – ತಂದ
ಮಾದರಿ ಯಾರೇ – ಸೌಟ ಯಿಡಿದೆತ್ತಿ ?
ನೀನಲ್ಲವೇ ನನ್ನ ಯೆಂಡತ್ತಿ ?

IV. ಆರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (6×4=24)

1) ಭಾನುಮತಿ 'ಸುಯೋಧನನನ್ನು ಕಾಪಾಡು' ಎಂದು ಧರ್ಮರಾಯನನ್ನು ಕೇಳಲು ಕಾರಣವೇನು ?
2) ತಿರುನೀಲಕಂಠರ ಪತ್ನಿ ಸಿಡಿಮಿಡಿಗೊಂಡ ಪರಿಣಾಮವೇನಾಯ್ತು ?
3) ಕರ್ಣನನ್ನು ಕೊಲ್ಲುವಾಗ ಅರ್ಜುನನಲ್ಲಿ ಉಂಟಾದ ಮಾನಸಿಕ ಕ್ಷೋಭೆಯೇನು ?
4) ರಾಮಿಯ ಮೇಲೆ ಅಧಿಕಾರಿಗಳು ನಡೆಸಿದ ದೌರ್ಜನ್ಯವನ್ನು ಕುರಿತು ಬರೆಯಿರಿ.
5) ಖಡ್ಗದಿಂದ ರುದ್ರಪ್ಪನ ತಾಯಿ ಮತ್ತು ಹೆಂಡತಿ ಅನುಭವಿಸಿದ ಸಂಕಷ್ಟಗಳೇನು ?
6) ಜೈನ ಧರ್ಮದ ಬಗ್ಗೆ ರತ್ನಾಕರವರ್ಣಿಯ ಅಭಿಪ್ರಾಯವನ್ನು ಲೇಖಕರು ಹೇಗೆ ವಿವರಿಸಿದ್ದಾರೆ ? ತಿಳಿಸಿ.
7) ನಾಗನ ಪ್ರಪಂಚವನ್ನು ಕುರಿತು ಬರೆಯಿರಿ.
8) ದೊರೆ ನಜಿರುದ್ದೀನ್ ಶಾ ನನ್ನು ಕುರಿತು ಬರೆಯಿರಿ.

V. ನಾಲ್ಕು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : (4×10=40)

1) ಯುದ್ಧರಂಗದಲ್ಲಿ ಕರ್ಣನನ್ನು ಕಂಡಾಗ ಅರ್ಜುನನ ಮನಸ್ಸಿನಲ್ಲುಂಟಾದ ತಾಕಲಾಟಗಳೇನು ?

ಅಥವಾ

ದುರ್ಯೋಧನನಿಗೆ ಒದಗಿದ ಸ್ಥಿತಿಯನ್ನು ಧರ್ಮರಾಯನು ಪರಿಹರಿಸಿದ ಸಂದರ್ಭದ ಸ್ವಾರಸ್ಯವನ್ನು ಬರೆಯಿರಿ.

2) ದ್ರೌಪದಿಯ ಮುಡಿಯನ್ನು ಕುರಿತು ಕುವೆಂಪುರವರ ತೌಲನಿಕ ಚರ್ಚೆಯನ್ನು ವಿಶದಪಡಿಸಿ.

ಅಥವಾ

ಜಿನ ಧರ್ಮವನ್ನು ರತ್ನಾಕರವರ್ಣಿ ಹೇಗೆ ಚಿತ್ರಿಸಿದ್ದಾನೆ ?

3) 'ಲೂಟಿ' ಕಥೆಯಲ್ಲಿನ ಲೂಟಿಯನ್ನು ಕುರಿತು ಬರೆಯಿರಿ.

ಅಥವಾ

ರುದ್ರಪ್ಪ ಬುದ್ಧಿ ಕಲಿತ ಬಗೆ ಹೇಗೆ ? ವಿವರಿಸಿ.

4) 'ಗುಣಮುಖ' ನಾಟಕದ ಶೀರ್ಷಿಕೆಯ ಔಚಿತ್ಯವನ್ನು ವಿವರಿಸಿ.

ಅಥವಾ

ನಿಜಾಮ್-ಉಲ್-ಮುಲ್ಕ್, ಅಲಾವಿ ಖಾನ್, ರಜ್ವಿ ಇವರಲ್ಲಿ ಇಬ್ಬರ ಪಾತ್ರವನ್ನು ಪರಿಚಯಿಸಿ.

---